


**SARAYU** - Kannada Monthly Regn. No. KARKAN/2014/62363
**Vol. : 9 Issue : 6 Month - November** 5124/ ಶುಭಕೃತ್ ಸಂವತ್ಸರ ನವೆಂಬರ್ 2022 ಪುಟ 4 **Rs. 10/-**

Postal Regn No. PTR/136/2022-24
Licensed to Post without pre-payment
License No: SK/WPP/PTR/117/2022-24

## ಪ್ರೌಢಶಾಲಾ ವಿಭಾಗದ ಬಾಲಿಕಾ ಶಿಬಿರ – 13.10.2022 – 15.10.2022





- ಶ್ರೀರಾಮ ಪ್ರೌಢಶಾಲೆ ಮತ್ತು ಶ್ರೀರಾಮ ಸೆಕೆಂಡರಿ ಸ್ಕೂಲ್‌ನ ವಿದ್ಯಾರ್ಥಿನಿಯರಿಗಾಗಿ ಇದೇ ಮೊದಲ ಬಾರಿ 3 ದಿನಗಳ ಆವಾಸೀಯ ಬಾಲಿಕಾ ಶಿಬಿರವನ್ನು ಶಾಲಾ ಆವರಣದಲ್ಲಿ ಹಮ್ಮಿಕೊಳ್ಳಲಾಗಿತ್ತು. ಮಂಗಳೂರಿನ ಅಸಿಸ್ಟೆಂಟ್ ಕಮಿಷನರ್ ಆಫ್ ಪೋಲೀಸ್ ಶ್ರೀಮತಿ ಗೀತಾ ಕುಲಕರ್ಣಿ ಶಿಬಿರವನ್ನು ಉದ್ಘಾಟಿಸಿದರು.
- ವಿವಿಧ ಅವಧಿಗಳಲ್ಲಿ ಯೋಗಾಸನ, ಯೋಗನಿದ್ರೆ, ದೇಶೀಯ ಆಟಗಳು, ಪಥಸಂಚಲನ, ಯೋಗ ವ್ಯಾಯಾಮ ಮುಂತಾದ ಶಾರೀರಿಕ ಚಟುವಟಿಕೆಗಳು, ಗುಂಪು ಚರ್ಚೆ, ಬೈಠಕ್, ಬೌದ್ಧಿಕ್, ಕಥಾ ಹಾಗೂ ಅನೌಪಚಾರಿಕ ಅವಧಿಗಳು ಮತ್ತು ಸಾಮೂಹಿಕ ಸಹಜೀವನದ ಮತ್ತು ರಾಷ್ಟ್ರೀಯ ದೃಷ್ಟಿಕೋನವೀಯುವ ಶಿಕ್ಷಣವನ್ನು ಇಲ್ಲಿ ನೀಡಲಾಯಿತು. ಶಿಬಿರದಲ್ಲಿ 208 ಶಿಬಿರಾರ್ಥಿಗಳು 36 ಶಿಕ್ಷಕಿಯರು ಪಾಲ್ಗೊಂಡಿದ್ದರು.
- ಡಾ। ಲಕ್ಷ್ಮೀ .ಎನ್.ಪ್ರಸಾದ್ ಶೃಂಗೇರಿ, ಡಾ। ಪ್ರಭಾಕರ್ ಭಟ್, ಶ್ರೀ ರಾಧಾಕೃಷ್ಣ ಅಡ್ಯಂತಾಯ, ಶ್ರೀ ರವಿರಾಜ್ ಕಣಂತೂರು, ಶ್ರೀ ರಾಜೇಶ್ ಶ್ರೀಮಾನ್, ಡಾ।ಕಮಲ ಪ್ರಭಾಕರ ಭಟ್ ಹಾಗೂ ಮಾತಾಜಿಗಳಾದ ಪ್ರೀತಾ, ರೂಪಕಲಾ, ದೇವಿಕಾ, ದೀಕ್ಷಾ, ಗಾಯತ್ರಿ ಬೌದ್ಧಿಕ ಚಟುವಟಿಕೆಗಳನ್ನು ನಡೆಸಿಕೊಟ್ಟರು. ಶ್ರೀಮತಿ ಯಶೋಧಾರಾಮಚಂದ್ರ ಸಮಾಪನ ನುಡಿಗಳನ್ನಾಡಿದರು. ಶ್ರೀ ರಮೇಶ್ ಎನ್, ಶ್ರೀಮತಿ ಶಾಂಭವಿ, ಶ್ರೀ ಗೋಪಾಲ್, ಶ್ರೀ ತಿರುಮಲೇಶ್ವರ ಪ್ರಶಾಂತ್ ಉಪಸ್ಥಿತರಿದ್ದರು.

## ಕನ್ನಡ ರಾಜ್ಯೋತ್ಸವದ ಅಂಗವಾಗಿ ವಿವಿಧ ವಿಭಾಗಗಳಲ್ಲಿ ಕೋಟಿಕಂಠ ಗಾಯನ 28.10.2022













ಕನ್ನಡ ಸಂಸ್ಕೃತಿ ಇಲಾಖೆ ನಡೆಸಿದ ಕೋಟಿಕಂಠ ಗಾಯನ ಕಾರ್ಯಕ್ರಮವು ವಿದ್ಯಾಕೇಂದ್ರದ ಎಲ್ಲಾ ವಿಭಾಗಗಳಲ್ಲಿ ಪ್ರತ್ಯೇಕವಾಗಿ ಆಚರಿಸಲಾಯಿತು. ಪ್ರಾಥಮಿಕ ಶಾಲೆಯ 1317, ಪೌಢಶಾಲೆಯ 908, ಸೆಕೆಂಡರಿ ಸ್ಕೂಲ್‌ನ 55, ಪದವಿ ಪೂರ್ವದ 756, ಪದವಿಯ 270 ವಿದ್ಯಾರ್ಥಿಗಳು, ವಿದ್ಯಾ–ಕೇಂದ್ರದ ಸಂಸ್ಥಾಪಕರು, ಸಂಚಾಲಕರು, ಸಹಸಂಚಾಲಕರು, ಆಡಳಿತ ಮಂಡಳಿ ಸದಸ್ಯರು, ಶಿಕ್ಷಕರು, ಶಿಕ್ಷಕೇತರರು, ಶಾಲಾಭಿವೃದ್ಧಿ, ಮಾತೃಭಾರತಿ ಸದಸ್ಯರು ಭಾಗವಹಿಸಿದ್ದರು. ನಾಡಗೀತೆ, ಬಾರಿಸು ಕನ್ನಡ ಡಿಂಡಿಮವ, ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು, ವಿಶ್ವವಿನೂತನ ವಿದ್ಯಾಚೇತನ ಹಾಗೂ ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು ಎನ್ನುವ 5 ಗೀತೆಗಳನ್ನು ಹಾಡಲಾಯಿತು. ಬಳಿಕ ಕನ್ನಡ ನಾಡು ನುಡಿಯ ಬಗೆಗೆ ಪ್ರತಿಜ್ಞಾ ವಿಧಿ ಬೋಧಿಸಲಾಯಿತು.

## ವಿಜಯದಶಮಿ ಪ್ರಯುಕ್ತ ಸರಸ್ವತಿ ಹೋಮ – ವಿದ್ಯಾರಂಭ – ಆಯುಧ ಪೂಜೆ – ವಾಹನ ಪೂಜೆ ಕಾರ್ಯಕ್ರಮ 4.10.2022

4 ವರ್ಷ ತುಂಬಿದ ಶಿಶುಮಂದಿರದ ಶಿಶುಗಳಿಗೆ ಶ್ರೀ ಒಡಿಯೂರು ಕ್ಷೇತ್ರದ ಸಾಧ್ವಿ ಮಾತಾನಂದಮಯಿಯವರು ಅಕ್ಷರ ದೀಕ್ಷೆ ನೀಡಿದರು. ಶಾಲಾ ವಾಹನದ ಪೂಜೆಯ ಬಳಿಕ ವಾಹನ ಚಾಲಕರಿಗೆ ಡಾ। ಪ್ರಭಾಕರ ಭಟ್ ಸಮವಸ್ತ್ರ ವಿತರಿಸಿದರು.. ಸೀತಾರಸೋಯಿ, ಹಾಗೂ ವಿವಿಧ ವಿಭಾಗಗಳಲ್ಲಿರುವ ಪ್ರಯೋಗಾಲಯ, ಯಂತ್ರಾಲಯಗಳಲ್ಲಿ ಪೂಜೆ ನಡೆಯಿತು. ಎಲ್ಲಾ ಕಾರ್ಯಕ್ರಮಗಳಲ್ಲಿ ವಿದ್ಯಾಕೇಂದ್ರದ ಹಿರಿಯರು ಭಾಗವಹಿಸಿದ್ದರು.








**ಪ್ರಾಂತೀಯ ಜ್ಞಾನ ವಿಜ್ಞಾನ ಮೇಳ: 1.10.2022**

ಮೈಸೂರು ಹುಣಸೂರಿನ ಶಾಸ್ತ್ರಿ ಪಬ್ಲಿಕ್ ಶಾಲೆಯಲ್ಲಿ ನಡೆದ ಪ್ರಾಂತೀಯ ಜ್ಞಾನ ವಿಜ್ಞಾನ ಮೇಳದಲ್ಲಿ 7ನೇ ತರಗತಿಯ ಮೋನಿಷಾ ಹಾಗೂ 5ನೇ ತರಗತಿಯ ಸಾನ್ವಿ ಕಾಮತ್ ಪ್ರಥಮ,7ನೇ ತರಗತಿಯ ದಕ್ಷ, ಬ್ರಾಹ್ಮಿ ಹಾಗೂ ಪ್ರೇಕ್ಷ, ದಿಶಾನ್ ಹಾಗೂ ಶ್ರೀಹರಿಗೆ ತೃತೀಯ ಸ್ಥಾನ.



**ಕ್ಷೇತ್ರಮಟ್ಟದ ಜ್ಞಾನ ವಿಜ್ಞಾನ ಮೇಳ : 13.10.2022**

ಹೈದರಾಬಾದ್‌ನ ಶ್ರೀ ವಿದ್ಯಾರಣ್ಯ ಆವಾಸ ವಿದ್ಯಾಲಯದಲ್ಲಿ ನಡೆದ ಗಣಿತ–ವಿಜ್ಞಾನ ಮೇಳದಲ್ಲಿ 7ನೇ ತರಗತಿ ಮೋನಿಷಾ, 5ನೇ ತರಗತಿ ಸಾನ್ವಿ ಕಾಮತ್, ಬೆಳಕು ಮತ್ತು ಅದರ ಅನ್ವಯಿಕಗಳು ಎಂಬ ವಿಜ್ಞಾನ ಮಾದರಿ ಪ್ರದರ್ಶನದಲ್ಲಿ ಪ್ರಥಮ ಸ್ಥಾನ ಪಡೆದು ರಾಷ್ಟ್ರಮಟ್ಟಕ್ಕೆ ಆಯ್ಕೆ.



**ಪ್ರತಿಜ್ಞಾ ವಿಧಿ ಸ್ವೀಕಾರ : 19.10.2022**

ಸಂಸ್ಥೆಗೆ ಹೊಸದಾಗಿ ನೇಮಕಾತಿಯಾದವರಿಗೆ ನಡೆದ ಪ್ರತಿಜ್ಞಾ ವಿಧಿ ಸ್ವೀಕಾರ ಕಾರ್ಯಕ್ರಮವು ಪುತ್ತೂರಿನಲ್ಲಿ ನಡೆಯಿತು. ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ ಶ್ರೀಯುತ ಡಾ। ಪ್ರಭಾಕರ್ ಭಟ್ ಕಲ್ಲಡ್ಕ ಉಪಸ್ಥಿತರಿದ್ದರು.

**3ನೇ ತರಗತಿ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರವಾಸ 28.10.22:** ಪಿಲಿಕುಳ ನಿಸರ್ಗಧಾಮ, ತಾರಾಲಯ, ಕದ್ರಿ ದೇವಸ್ಥಾನ ಹಾಗೂ ಪಣಂಬೂರು ಕಡಲತೀರಕ್ಕೆ ಆಯೋಜಿಸಲಾಗಿತ್ತು. 137 ವಿದ್ಯಾರ್ಥಿಗಳು, 8 ಮಾತಾಜಿಯವರು ಈ ಪ್ರವಾಸದಲ್ಲಿ ಪಾಲ್ಗೊಂಡಿದ್ದರು.





ದೀಪಾವಳಿ ಆಚರಣೆ : 25.10.22



**ರಂಗಮಂಚ : 29.10.2022:** ಬುನಾದಿ ಶಿಕ್ಷಣದ ಕಲ್ಪನೆಯಂತೆ ಈವರೆಗೆ ಒಂದು ಬಾರಿಯೂ ವೇದಿಕೆಯಲ್ಲಿ ಭಾಗವಹಿಸದ ವಿದ್ಯಾರ್ಥಿಗಳಿಗಾಗಿ ರಂಗಮಂಚ ಎಂಬ ಕಾರ್ಯಕ್ರಮ. ಕಾರ್ಯಕ್ರಮದಲ್ಲಿ ಕುಣಿತ ಭಜನೆ, ನೃತ್ಯ ರೂಪಕ, ನಾಟಕ, ಇಂಗ್ಲೀಷ್ ಹಾಡು, ವೇಣುಗಾಯನ ಪ್ರದರ್ಶನಗೊಂಡಿತು.



ಸವಿರುಚಿ: 31.10.22



ಪ್ರಶಸ್ತಿ ಪತ್ರ ವಿತರಣೆ 31.10.22

ಸವಿರುಚಿ ಎಂಬ ಪಠ್ಯಪೂರಕ ಚಟುವಟಿಕೆಯ ಅಂಗವಾಗಿ ವಿದ್ಯಾರ್ಥಿಗಳು ತಮ್ಮ ಮನೆಗಳಿಂದ ತಂದ ಉಪಾಹಾರವನ್ನು ಒಟ್ಟಾಗಿ ಸ್ವೀಕರಿಸಿ ಸಂಭ್ರಮಿಸಿದರು. ಇದೇ ಸಂದರ್ಭದಲ್ಲಿ ಹಿರಿಯರಾದ ಡಾ। ಕಮಲಾ ಪ್ರಭಟ್ ಜ್ಞಾನವಿಕಾಸ ಸ್ಪರ್ಧಾ ವಿಜೇತರಿಗೆ (ಶ್ರೀ ಧರ್ಮಸ್ಥಳ ಶಾಂತಿವನ ಟ್ರಸ್ಟ್(ರಿ) ವತಿಯಿಂದ ನಡೆದ ಜ್ಞಾನ ವಿಕಾಸ ಎಂಬ ನೈತಿಕ ಮೌಲ್ಯಧಾರಿತ ಪುಸ್ತಕಗಳ ಆಧರಿಸಿ ನಡೆದ ಸ್ಪರ್ಧೆ) ಪ್ರಶಸ್ತಿ ಪತ್ರ ನೀಡಿ ಅಭಿನಂದಿಸಿದರು.

## ಪ್ರೌಢಶಾಲೆ



**ಪ್ರಾಂತೀಯ ಜ್ಞಾನ–ವಿಜ್ಞಾನ ಮೇಳ 01.10.22**

ಶಾಸ್ತ್ರೀ ಪಬ್ಲಿಕ್ ಸ್ಕೂಲ್ ಹುಣಸೂರು, ಇಲ್ಲಿ ನಡೆದ ಗಣಿತ–ವಿಜ್ಞಾನ ಮೇಳದಲ್ಲಿ ವಿಜ್ಞಾನ ಪ್ರದರ್ಶನದಲ್ಲಿ 8ನೇ ತರಗತಿಯ ವರುಣ್ ಪ್ರಥಮ, ಗಣಿತ ಪತ್ರವಾಚನದಲ್ಲಿ 8ನೇ ತರಗತಿಯ ಸುಮೇಧಾ. ಹೆಚ್ ತೃತೀಯ, ವೇದಗಣಿತ ರಸಪ್ರಶ್ನೆಯಲ್ಲಿ 10ನೇ ತರಗತಿಯ ಚಿನ್ಮಯಿ, ಆಶಿಕ, 9ನೇ ತರಗತಿಯ ಆಕಾಶ್ ದ್ವಿತೀಯ ಸ್ಥಾನ.



**ರೇಬಿಸ್ ಜಾಗೃತಿ ಶಿಬಿರ 25.10.2022 :** ಪಶುಪಾಲನ, ಪಶು ವೈದ್ಯಕೀಯ ಸೇವಾ ಇಲಾಖೆ ಬಂ. ತಾಲೂಕು, ಪಶು ಆಸ್ಪತ್ರೆ ಕಲ್ಲಡ್ಕದ ವತಿಯಿಂದ ನಡೆದ ರೇಬಿಸ್ ಜಾಗೃತಿ ಶಿಬಿರದಲ್ಲಿ ಕಲ್ಲಡ್ಕದ ಪಶು ವೈದ್ಯಾಧಿಕಾರಿ (ಪ್ರಭಾರ) ಡಾ। ಕಾರ್ತಿಕ್.ಪಿ ಇವರು ರೇಬಿಸ್ ರೋಗದ ಹರಡುವಿಕೆಯನ್ನು ವಿವರಿಸಿದರು. ಬಂ.ಜಾ.ಅ.ಅಧಿಕಾರಿ ಶ್ರೀ ಕೃಷ್ಣಮೂರ್ತಿ.ಜಿ ಉಪಸ್ಥಿತರಿದ್ದರು.




**ಕ್ಷೇತ್ರೀಯ ಗಣಿತ–ವಿಜ್ಞಾನ ಮೇಳದಲ್ಲಿ ದ್ವಿತೀಯ ಸ್ಥಾನ 13.10.2022**

8ನೇ ತರಗತಿಯ ವರುಣ್ ಹೈದರಾಬಾದ್‌ನಲ್ಲಿ ನಡೆದ ಕ್ಷೇತ್ರೀಯ ಗಣಿತ–ವಿಜ್ಞಾನ ಮೇಳದಲ್ಲಿ ದ್ವಿತೀಯ ಸ್ಥಾನ ಹಾಗೂ ನೇತಾಜಿ ಸುಭಾಷ್‌ಚಂದ್ರ ಬೋಸ್ ಸರಕಾರಿ ಪ್ರೌಢಶಾಲೆ ಕೊಡಂಗೆ ಇಲ್ಲಿ ನಡೆದ ಬಂಟ್ವಾಳ ತಾಲೂಕು ಮಟ್ಟದ ವಿಜ್ಞಾನ ವಸ್ತುಪ್ರದರ್ಶನದಲ್ಲಿ ದ್ವಿತೀಯ ಸ್ಥಾನ ಪಡೆದಿರುತ್ತಾನೆ.

**ಲಾಲ್ ಬಹದ್ದೂರ್ ಶಾಸ್ತ್ರಿ ಮತ್ತು ಗಾಂಧಿ ಜಯಂತಿ: ಶ್ರೀರಾಮ ಪ್ರೌಢಶಾಲೆ ಮತ್ತು ಶ್ರೀರಾಮ ಸೆಕೆಂಡರಿ ಸ್ಕೂಲ್‌ನಲ್ಲಿ 2.10.2022ರಂದು ಸ್ವಚ್ಛತಾ ಕಾರ್ಯಮಾಡುವ ಮೂಲಕ ಕಾರ್ಯಕ್ರಮವನ್ನು ಆಚರಿಸಲಾಯಿತು. ಅಧ್ಯಾಪಕರು, ಅಧ್ಯಾಪಕೇತರರು ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು.**



**ಪ್ರಾಂತ ಮಟ್ಟದ ಜ್ಞಾನ ವಿಜ್ಞಾನ ಮೇಳ 01.10.22**
ಶಾಸ್ತ್ರಿ ವಿದ್ಯಾಸಂಸ್ಥೆ ಹುಣಸೂರಿನಲ್ಲಿ ನಡೆದ ಪ್ರಾಂತ ಮಟ್ಟದ ಜ್ಞಾನ ವಿಜ್ಞಾನ ಮೇಳದಲ್ಲಿ ಸ್ಪರ್ಧಿಸಿದ ಪದವಿ ಪೂರ್ವ ವಿಭಾಗದ 18 ವಿದ್ಯಾರ್ಥಿಗಳು ಪ್ರಥಮ ಸ್ಥಾನ ಪಡೆದು ಕ್ಷೇತ್ರೀಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.



**ಅಂತರ್ ಕಾಲೇಜು ಸಾಂಸ್ಕೃತಿಕ ಸ್ಪರ್ಧೆ 1.10.22**
ಮಠಂತಬೆಟ್ಟು ಶ್ರೀ ಮಹಿಷಮರ್ದಿನಿ ದೇವಸ್ಥಾನ ಕೋಡಿಂಬಾಡಿ ಪುತ್ತೂರಿನಲ್ಲಿ ನಡೆದ ಅಂತರ್ ಕಾಲೇಜು ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಪದವಿಪೂರ್ವ ವಿಭಾಗದ ವಿದ್ಯಾರ್ಥಿಗಳು ತೃತೀಯ ಸ್ಥಾನ ಪಡೆದಿದ್ದಾರೆ.



**ಜಿಲ್ಲಾ ಮಟ್ಟದ ಅಥ್ಲೆಟಿಕ್ಸ್ ಸ್ಪರ್ಧೆ 07.10.22:** ಶಾರದಾ ವಿದ್ಯಾಲಯ ಮಂಗಳೂರು ಇದರ ಆಶ್ರಯದಲ್ಲಿ ನಡೆದ ವಿದ್ಯಾಭಾರತಿ ಜಿಲ್ಲಾ ಮಟ್ಟದ ಅಥ್ಲೆಟಿಕ್ಸ್ ಸ್ಪರ್ಧೆಯಲ್ಲಿ 24 ವಿದ್ಯಾರ್ಥಿಗಳು ಭಾಗವಹಿಸಿ 18 ವಿದ್ಯಾರ್ಥಿಗಳು ಬಳ್ಳಾರಿಯಲ್ಲಿ ನಡೆದ ಪ್ರಾಂತ ಮಟ್ಟದ ಅಥ್ಲೆಟಿಕ್ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ



**ಕ್ಷೇತ್ರ ಮಟ್ಟದ ಗಣಿತ–ವಿಜ್ಞಾನ ಮೇಳ 12.10.22**
ಹೈದರಾಬಾದ್‌ನ ಶ್ರೀ ವಿದ್ಯಾರಣ್ಯ ಆವಾಸ ವಿದ್ಯಾಲಯದಲ್ಲಿ ನಡೆದ ಕ್ಷೇತ್ರ ಮಟ್ಟದ ಗಣಿತ –ವಿಜ್ಞಾನ ಮೇಳದಲ್ಲಿ ಪ. ಪೂರ್ವ ವಿಭಾಗದ 18 ವಿದ್ಯಾರ್ಥಿಗಳಲ್ಲಿ 17 ವಿದ್ಯಾರ್ಥಿಗಳು ಪ್ರಥಮ ಸ್ಥಾನ ಪಡೆದು ರಾಷ್ಟ್ರ ಮಟ್ಟದ ಆಯ್ಕೆ.



**ರಾಷ್ಟ್ರಮಟ್ಟಕ್ಕೆ ಆಯ್ಕೆ 28.10.22:** ಕಲ್ಬುರ್ಗಿ ಜಿಲ್ಲೆಯಲ್ಲಿ ನಡೆದ ಪ್ರಾಂತ ಮಟ್ಟದ ತ್ರೋಬಾಲ್ ಪಂದ್ಯಾಟದಲ್ಲಿ ದ್ವಿ. ವಾಣಿಜ್ಯದ ರೈನಾ ಜೋಯ್ಸ್ ಪಿಂಟೋ ಹಾಗೂ ಪ್ರ.ವಿಜ್ಞಾನದ ಪೃಥ್ವಿ, ಹಾಗೂ ಪ್ರ. ವಾಣಿಜ್ಯ ವಿಭಾಗದ ಭವೀಶ್ ವಾಲಿಬಾಲ್ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದು ರಾಷ್ಟ್ರಮಟ್ಟದ ವಾಲಿಬಾಲ್ ಸ್ಪರ್ಧೆಗೆ ಆಯ್ಕೆಯಾಗಿರುತ್ತಾನೆ

**ಓಪನ್ 'ಕರಾಟೆ ಚಾಂಪಿಯನ್ ಶಿಪ್:**



ಕೊಡಗಿನ ಕುಶಾಲನಗರ ದಲ್ಲಿ ಜರಗಿದ ರಾಜ್ಯ ಮಟ್ಟದ ಓಪನ್ 'ಕರಾಟೆ ಚಾಂಪಿಯನ್ ಶಿಪ್ – 2022' ಸ್ಪರ್ಧೆಯ ಕಟಾ ವಿಭಾಗದಲ್ಲಿ ಪ್ರಥಮ ಪಿಯುಸಿ ವಿದ್ಯಾರ್ಥಿ ಮನ್ವಿತ್ ಪ್ರಥಮ ಸ್ಥಾನ ಪಡೆದಿದ್ದಾರೆ.





**ಎಂ.ಸಿ.ಜೆ ವಿಭಾಗಕ್ಕೆ ಭೇಟಿ – 10.10.22**
ಅಂತಿಮ ವರ್ಷದ ಬಿ.ಎ ವಿದ್ಯಾರ್ಥಿಗಳು "ವಿವೇಕಾನಂದ ಮಹಾವಿದ್ಯಾಲಯ" ಪುತ್ತೂರಿನ M.C.J ವಿಭಾಗಕ್ಕೆ ಭೇಟಿ ನೀಡಿದರು. ಉಪನ್ಯಾಸಕರಾದ ಕು. ಸಂಧ್ಯಾ ಜೊತೆಗಿದ್ದರು. ನ್ಯೂಸ್ ಆ್ಯಂಕರಿಂಗ್, ವರದಿ, ವೀಡಿಯೋ ಎಡಿಟಿಂಗ್, ಸ್ಕ್ರಿಪ್ಟ್ ಬರವಣಿಗೆ, ಫೋಟೋಗ್ರಾಫಿಯ ಬಗ್ಗೆ ಮತ್ತು ರೇಡಿಯೋ ಪಾಂಚಜನ್ಯದ ಬಗ್ಗೆ ವಿವರ ತಿಳಿದುಕೊಂಡರು.



**ಸೋಶಿಯಲ್ ಮೀಡಿಯಾ ಸಮಾವೇಶ – 17.10.22**
ವಿಶ್ವ ಸಂವಾದ ಕೇಂದ್ರ ಮಂಗಳೂರು ವಿಭಾಗ, ಆಯೋಜಿಸಲ್ಪಟ್ಟ ಸೋಶಿಯಲ್ ಮೀಡಿಯಾ ಸಮಾವೇಶದಲ್ಲಿ ಶ್ರೀರಾಮ ಪದವಿ ಕಾಲೇಜಿನ ವಿದ್ಯಾರ್ಥಿಗಳಾದ ಪ್ರೀತೇಶ್, ಕಾರ್ತಿಕ್, ದೀಕ್ಷಿತ್, ಚೇತನ್, ಲಿತಿನ್, ವಿನಯ್ ಭಾಗವಹಿಸಿರುತ್ತಾರೆ.



**"ಕಲಾ ಯಶಸ್ವಿ " ಸ್ಪರ್ಧೆ – 23.10.22**
ವಿದ್ಯಾರ್ಥಿಗಳಾದ ಜೈದೀಪ್, ಶಿವನಿವಾಸ್, ಲಿತಿನ್, ದೀಕ್ಷಿತ್, ರೋಹಿತ್, ಸಂದೀಪ್, ಪ್ರವೀಣ್, ಅಂಕಿತಾ, ಅರ್ಪಿತಾ, ಹರ್ಷಿತಾ, ದಿವ್ಯಾ ಹಾಗೂ ಮುತಾಂದ ವಿದ್ಯಾರ್ಥಿಗಳು ಸೇರಿ ರಚಿಸಿರುವ ಸಾಂಸ್ಕೃತಿಕ ತಂಡ "ಕಲಾ ತಪಸ್ವಿ" ಕಾಯಕ್ರಮದ ಅಂಗವಾದ "ಕಲಾ ಯಶಸ್ವಿ" ಸ್ಪರ್ಧೆಯನ್ನು ಏರ್ಪಡಿಸಿ ಪ್ರಶಸ್ತಿ ಪ್ರದಾನ ಕಾಯಕ್ರಮವನ್ನು ಹಮ್ಮಿಕೊಂಡಿದ್ದರು.



**ಕಾನೂನು ಮಾಹಿತಿ ಕಾರ್ಯಾಗಾರ –28.10.22**
ಬಂಟ್ವಾಳ ವಕೀಲರ ಸಂಘ(ರಿ) ಮತ್ತು "ಮಾನವಿಕ ಸಂಘ" ಆಶ್ರಯದಲ್ಲಿ ನಡೆದ ಕಾನೂನು ಮಾಹಿತಿ ಕಾರ್ಯಾಗಾರದಲ್ಲಿ ಪ್ರಧಾನ ಸಿವಿಲ್ ನ್ಯಾಯಾಧೀಶರು ಶ್ರೀ.ಚಂದ್ರಶೇಖರ .ವೈ. ತಳವಾರ ಹಾಗೂ ಹಿರಿಯ ವಿದ್ಯಾರ್ಥಿ ನ್ಯಾಯವಾದಿ ಶ್ರೀ ದೀಪಕ್ ಪೆರಾಜೆ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದರು.



**ಜನಪದ ನೃತ್ಯ ಸ್ಪರ್ಧೆಯಲ್ಲಿ ಭಾಗಿ – 29.10.22**
ಶ್ರೀಕೃಷ್ಣ ಧ್ಯಾನ ಮಂದಿರ ಮುಡಿಪು, ಇಲ್ಲಿ ನಡೆದ ಗೋವರ್ಧನೋತ್ಸವ 2022 ನಲ್ಲಿ ನಮ್ಮ ಕಾಲೇಜಿನ ವಿದ್ಯಾರ್ಥಿಗಳು ಜನಪದ ನೃತ್ಯ ಸ್ಪರ್ಧೆಯಲ್ಲಿ ಭಾಗವಹಿಸಿರುತ್ತಾರೆ. ವಾಣಿಜ್ಯ ವಿಭಾಗದ ಉಪನ್ಯಾಸಕರಾದ ಶ್ರೀಮತಿ ವಿನುತಾ ಮಾತಾಜಿ ಸಹಕರಿಸಿದರು.



**ಮಂಥನ – 29.10.22:** ಸೆಕ್ಯೂಲರಿಸಂ ಮತ್ತು ರಾಷ್ಟ್ರೀಯತೆ ವಿಷಯದ ಮಂಥನ ಕಾರ್ಯಕ್ರಮದಲ್ಲಿ ರಾ.ಸ್ವ.ಸಂಘದ ಹಿರಿಯ ಪ್ರಚಾರಕರಾದ ಮಾನ್ಯ ಶ್ರೀ ಸು. ರಾಮಣ್ಣ ಇವರು ವಿಷಯ ಮಂಡನೆ ಮಾಡಿದರು. ಡಾ। ಪ್ರಭಾಕರ ಭಟ್ ಕಲ್ಲಡ್ಕ, ವಿದ್ಯಾ–ಕೇಂದ್ರದ ವಿವಿಧ ವಿಭಾಗಗಳ ಬೋಧಕ ಹಾಗೂ ಬೋಧಕೇತರ ವೃಂದದವರು ಉಪಸ್ಥಿತರಿದ್ದರು.

## ಪದವಿಪೂರ್ವ – ಉತ್ಥಾನ ಬಾಲಿಕಾ ಶಿಬಿರ 09.10.22 – 12.10.22





ಶ್ರೀರಾಮ ಪದವಿ ಪೂರ್ವ ವಿಭಾಗದಲ್ಲಿ ನಡೆದ ಉತ್ಥಾನ ಬಾಲಿಕಾ ಶಿಬಿರವನ್ನು ಡಾ. ಮೀನಾಕ್ಷಿ ರಾಮಚಂದ್ರ (ನಿವೃತ್ತ ಮುಖ್ಯಸ್ಥರು, ಕನ್ನಡ ವಿಭಾಗ ಬೆಸೆಂಟ್ ವಿಮೆನ್ಸ್ ಕಾಲೇಜು ಮಂಗಳೂರು) ಉದ್ಘಾಟಿಸಿದರು. ಸಂಚಾಲಕರಾದ ಶ್ರೀ ವಸಂತ ಮಾಧವ ಇವರು ಪ್ರಾಸ್ತಾವಿಕ ನುಡಿಗಳನ್ನಾಡಿದರು. ಡಾ। ಪ್ರಭಾಕರ ಭಟ್ ಕಲ್ಲಡ್ಕ ಇವರು ಶಿಬಿರಾರ್ಥಿಗಳಿಗೆ ಶುಭ ಹಾರೈಸಿದರು ಹಾಗೂ ಶಿಬಿರದ ಕೊನೆಯಲ್ಲಿ ಸಮಾರೋಪ ಭಾಷಣ ಮಾಡಿದರು. ಬಾಲಗೋಕುಲ ಪರಿಚಯ, ವೀರ ಪುರುಷ–ವನಿತೆಯರ ಕಥೆ, ಬಾಲಗೋಕುಲ ಪ್ರಾತ್ಯಕ್ಷಿಕ, ದಿಶಾ ಭಾರತ್ AHEAD ಸಂಸ್ಥೆ ಬೆಂಗಳೂರು ಇದರ ಸಂಪನ್ಮೂಲ ವ್ಯಕ್ತಿಗಳಿಂದ ರಾಷ್ಟ್ರವನ್ನು ತಿಳಿ, ಸಂಸ್ಕೃತಿಯನ್ನು ತಿಳಿ, ನಿನ್ನನ್ನು ತಿಳಿ ಎಂಬ ಪರಿಕಲ್ಪನೆಯಡಿ ವಿವಿಧ ಅವಧಿಗಳು ನಡೆದವು. ಶ್ರೀ ರಮೇಶ್ ಇವರು ಭಾರತ ಭೂಪಟ ಪರಿಚಯ, ಅರವಿಂದ್ ಚೊಕ್ಕಾಡಿ ಇವರ ಬೌದ್ಧಿಕ್ ಅವಧಿಗಳು ಆಯೋಜನೆಯಾಗಿತ್ತು. 4 ದಿನಗಳ ಶಿಬಿರದಲ್ಲಿ 188 ಶಿಬಿರಾರ್ಥಿಗಳು ಹಾಗೂ 10 ಶಿಕ್ಷಕಿಯರು ಭಾಗವಹಿಸಿದ್ದರು. ದಿನಾಂಕ 11.10.2022ರಂದು ಶ್ರೀ ಸೂರ್ಯನಾರಾಯಣ ಭಟ್ ರವರ ಮಾರ್ಗದರ್ಶನದಲ್ಲಿ ದೀಪಪೂಜನ್ ಕಾರ್ಯಕ್ರಮ ನಡೆಯಿತು. ದಿನಾಂಕ 12.10.2022 ಸಮಾರೋಪದಲ್ಲಿ ಶಿಬಿರಾರ್ಥಿಗಳು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು.



ಗುಜರಾತಿನ ಏಕತಾ ನಗರದಲ್ಲಿ

**"ಭಾರತ ದರ್ಶನ" ಪ್ರವಾಸ – 10.10.22 –18.10.22 :** ಶೈಕ್ಷಣಿಕ ವರ್ಷದ ಅಂತಿಮ ಪದವಿ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ "ಭಾರತ ದರ್ಶನ" ಪ್ರವಾಸದಲ್ಲಿ ಮುಂಬೈ, ದೆಹಲಿ, ಗುಜರಾತ್, ಸ್ಟ್ಯಾಚ್ಯೂ ಆಫ್ ಯೂನಿಟಿ, ವಾಘಾ ಬಾರ್ಡರ್, ಅಮೃತ್‌ಸರ, ಜಲಿಯನ್ ವಾಲಾಬಾಗ್, ಅಕ್ಷರಧಾಮ ಮುಂತಾದ ಸ್ಥಳಗಳಿಗೆ ಭೇಟಿ ನೀಡಲಾಯಿತು. 20 ವಿದ್ಯಾರ್ಥಿಗಳು ಹಾಗೂ 3 ಉಪನ್ಯಾಸಕರು ಭಾಗವಹಿಸಿರುತ್ತಾರೆ . ಅತ್ಯಂತ ಕಡಿಮೆ ವೆಚ್ಚದಲ್ಲಿ ಅಂತಿಮ ವರ್ಷದ ವಿದ್ಯಾರ್ಥಿಗಳಿಗಾಗಿ ಪ್ರತೀ ವರ್ಷ ಈ ಪ್ರವಾಸ ಯೋಜನೆಯಾಗುತ್ತಿದ್ದು, ಕೊರೋನಾ ನಂತರದ ಮೊದಲ ಪ್ರವಾಸವಾಗಿದೆ.



### ಜಿಲ್ಲಾ ಶಿಶುಶಿಕ್ಷಕಿಯರ ಪ್ರ ಶಿಕ್ಷಣ ವರ್ಗ

13.10.2022 ಮತ್ತು 14.10.2022

ಮಾರ್ಗದರ್ಶಕರಗಿ ಡಾ । ಪ್ರಭಾಕರ್ ಭಟ್ ಕಲ್ಲಡ್ಕ, ಶ್ರೀ ವೆಂಕಟ್ರಮಣ ಮಂಕುಡೆ, – ಶ್ರೀಮತಿ ಅನ್ನಪೂರ್ಣ, ಡಾ । ಕಮಲಾ ಭಟ್ ಕಲ್ಲಡ್ಕ ಸಂಧ್ಯಾ ನಾಡಿಗ್ ಉಪಸ್ಥಿತರಿದ್ದರು. 39 ಮಾತಾಜಿಯರು 20 ಸಹಶಿಕ್ಷಕಿಯರು ಭಾಗವಹಿಸದ್ದರು. ರಾಷ್ಟ್ರೀಯ ಶಿಕ್ಷಣ ನೀತಿಯ ಬಗ್ಗೆ ಈ ವಿಶೇಷ ಕಾರ್ಯಾಗಾರ ಆಯೋಜಿಸಲಾಗಿತ್ತು



ಕಲುಬುರಗಿಯ ಸೇಡಂನಲ್ಲಿ ನಡೆದ ಕ್ಷೇತ್ರಮಟ್ಟದ ವಾಲಿಬಾಲ್ ಪಂದ್ಯಾಟದಲ್ಲಿ 7ನೇ ತರಗತಿಯ ಗೌತಮ್ ಪ್ರಥಮ ಸ್ಥಾನ ಪಡೆದು ರಾಷ್ಟ್ರಮಟ್ಟಕ್ಕೆ ಆಯ್ಕೆ.

* ಶಿಶುಮಂದಿರದ ಮಕ್ಕಳು ಮತ್ತು ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗೆ ದಿನಾಂಕ 25.10.2022ರಂದು ಸೂರ್ಯಗ್ರಹಣ ಕುರಿತು ಮಾಹಿತಿ ನೀಡಲಾಯಿತು.

* ಪ್ರಾಥಮಿಕ ಶಾಲೆಯಲ್ಲಿ 22.10.22ರಂದು 2ನೇ ಶಾಲಾಸಂಸತ್ತು ಅಧಿವೇಶನ ನಡೆಯಿತು.

* ರಾಷ್ಟ್ರೀಯ ಏಕತಾ ದಿನದ ಅಂಗವಾಗಿ 31.10.2022ರಂದು ಸರ್ದಾರ್ ವಲ್ಲಭಬಾಯಿ ಪಟೇಲ್‌ರವರ ಜೀವನ ಚರಿತ್ರೆಯನ್ನು ಸಂಕ್ಷಿಪ್ತವಾಗಿ ಶ್ರೀ ಸುಮಂತ್ ಆಳ್ವ ತಿಳಿಸಿಕೊಟ್ಟರು.

* ಸೆಪ್ಟೆಂಬರ್ ಹಾಗೂ ಅಕ್ಟೋಬರ್ ತಿಂಗಳಿನಲ್ಲಿ ಹುಟ್ಟಿದ ಮಕ್ಕಳ ಹುಟ್ಟುಹಬ್ಬವನ್ನು 29.10.2022ರಂದು ಪ್ರಾಥಮಿಕ ಶಾಲೆಯಲ್ಲಿ ಹಾಗೂ 31.10.2022ರಂದು ಶಿಶುಮಂದಿರದಲ್ಲಿ ಸಾಮೂಹಿಕವಾಗಿ ಆಚರಿಸಲಾಯಿತು.


ಶುಭಕೋರುವ : **ಶ್ರೀರಾಮ ಸೌಹಾರ್ದ ಸಹಕಾರಿ ನಿಯಮಿತ**

ಪ್ರಧಾನ ಕಚೇರಿ: ಹನುಮಾನ್ ನಗರ, ಕಲ್ಲಡ್ಕ, ಬಂಟ್ವಾಳ ತಾಲೂಕು, 574222 ದೂ: 8255275173, 8147249174

ಶಾಖೆ : ಶ್ರೀರಾಮ ವಾಣಿಜ್ಯ ಸಂಕೀರ್ಣ ರಾಮನಗರ ಕಲ್ಲಡ್ಕ

ಕಲ್ಲಡ್ಕ ಶ್ರೀರಾಮ ವಾಣಿಜ್ಯ ಸಂಕೀರ್ಣದ ರಾಮ ನಗರ ಶಾಖೆಯಲ್ಲಿ E-Stamping ಠಸೆ ಕಾಗದ ಸೌಲಭ್ಯವಿದೆ

ಚಿನ್ನಾಭರಣ ಸಾಲ – 10.5%
ಜಾಮೀನು ಸಾಲ – 16%
ಅಡವು ಸಾಲ – 13%
ವಾಹನ ಸಾಲ – 11.5%
ಗೃಹ ನಿರ್ಮಾಣ ಸಾಲ – 11%

ಠೇವಣಿ ಮೇಲೆ ಆಕರ್ಷಕ ಬಡ್ಡಿ ದರ
91 ದಿನಗಳವರೆಗೆ – 6%
92 ರಿಂದ 181 ದಿನಗಳು – 6.5%
182ರಿಂದ 364 ದಿನಗಳು – 7.5%
1 ವರ್ಷ ಮೇಲ್ಪಟ್ಟು – 8%

ಸೌಲಭ್ಯಗಳು
ಆವರ್ತನ ಠೇವಣಿ (R.D)
ಸಂಚಯ ಠೇವಣಿ (S.D)
ನಿರಂತರ ಠೇವಣಿ (ಪಿಗ್ಮಿ)

ಹಿರಿಯ ನಾಗರಿಕರಿಗೆ, ಮಾಜಿ ಯೋಧರಿಗೆ ಮತ್ತು ವಿಧವೆಯರಿಗೆ 0.5% ಬಡ್ಡಿ ಹೆಚ್ಚಿಗೆ ನೀಡಲಾಗುವುದು



Postal Regn No. PTR/136/2022-24 Licensed to Post without pre-payment License No: SK/WPP/PTR/117/2022-24

KARKAN/2014/62363
Posted at Kalladka P.O. on 10th and 15th of Every month

Vol. : 9 Issue :6 Rs. 10/-

SRI RAMA VIDYAKENDRA TRUST (R.) Hanuman Nagar, Kalladka, Bantwal Tq., Dakshina Kannada, Karnataka 574 222
Website : www.srvk.org E-mail : info@srvk.org

BOOK POST

ಸವಿಧೇ,

Sarayu Kannada Monthly Edited and Published and Printed by B. Narayana Somayaji on behalf of Sri Rama Vidyakendra Trust, Hanuman Nagara, Kalladka, Bantwal Tq, Dakshina Kannada - 574 222. Phone : 9449728763 Printed at Digantha Mudrana Ltd. Magaluru 575008, Bantwal Tq., Dakshina Kannada, Karnataka. Registration No. : KARKAN/2014/62363